



ಬಾಂಬೆ ಅರ್ಥಾತ್ ಈಗಿನ ಮುಂಬೈನಲ್ಲಿ ಗಂಡುಮಗುವೊಂದು ಹುಟ್ಟಿತು. ಮೂವರು ಮಕ್ಕಳಲ್ಲಿ ಅದೇ ಕೊನೆಯದು. ಇಬ್ಬರು ಅಕ್ಕಂದಿರು. ಅಮ್ಮ, ಅಕ್ಕಂದಿರಿಗೆ ಅಡುಗೆಮನೆ ನೆಚ್ಚಿನ ತಾಣ. ಈ ಮಗುವಿಗೆ ಬೊಂಬೆಗಳಿಗಿಂತ ಪಾತ್ರೆ ಪಗಡೆಗಳೊಟ್ಟಿಗೆ ಆಡುವುದೇ ಖುಷಿ. ವಯಸ್ಸು ಮೂರು ಆಗಿತ್ತಷ್ಟೆ, ಆಗಲೇ ಅಮ್ಮನ–ಅಕ್ಕಂದಿರ ವಾದಗಳಿಗೆ ಪ್ರತಿವಾದಿಯಾಗುತ್ತಿತ್ತು ಮಗು. ಅಮ್ಮ ಆಗ ಸಹಜ ಮುದ್ದಿನಿಂದ ಹೇಳಿದ್ದು: ‘ಒಂದೋ ಇವನು ವಕೀಲನಾಗುತ್ತಾನೆ, ಇಲ್ಲವೇ ಶೆಫ್ ಅರ್ಥಾತ್ ಬಾಣಸಿಗ.’

ಮಾತುಂಗದ ಡಾನ್ ಬಾಸ್ಕೊ ಹೈಸ್ಕೂಲ್‌ನಲ್ಲಿ ಕಲಿಯುತ್ತಿದ್ದಾಗ ಅಡುಗೆಮನೆಯಲ್ಲಿ ಅಮ್ಮನಿಂದ ಹೊಸರುಚಿ, ಹೊಸ ಕೌಶಲ ಕಲಿಯುತ್ತಲೇ ಅಡುಗೆಯನ್ನು ಒಂದು ಕಲೆಯಾಗಿ ಪರಿಭಾವಿಸತೊಡಗಿದ ಹುಡುಗ, ಒಂಬತ್ತನೇ ಇಯತ್ತೆಯಲ್ಲಿ ಓದುವಾಗ, ‘ದೊಡ್ಡವನಾದ ಮೇಲೆ ಏನಾಗುವೆ’ ಎಂದು ಯಾರು ಕೇಳಿದರೂ ಎರಡನೇ

## ಯಶಸ್ಸಿಗೆ ಇದೆಯೇ ಸೂತ್ರ?

ಯೂಟ್ಯೂಬ್ ಚಾನೆಲ್‌ಗಳು ಯಶಸ್ವಿಯಾಗಲು ಇದಮಿತ್ಥಂ ಎನ್ನುವ ಸೂತ್ರಗಳಿಲ್ಲ. ‘ಹೆಬ್ಬಾರ್ಸ್ ಕಿಚನ್’ನ ಸುದರ್ಶನ್ ಹೇಳುವಂತೆ, ಇದು ನಿರಂತರ ಅಧ್ಯಯನ ಬೇಡುವ ಶ್ರಮದ ಕೆಲಸ. ಶೆಫ್ ವರುಣ್ ಇನಾಂದಾರ್ ಪ್ರಕಾರ, ಸುಲಭವಾಗಿ ಸಿಗುವಂತಹ ಪರಿಕರಗಳಲ್ಲಿ ಥಟ್ಟನೆ ಮಾಡಬಹುದಾದ ಸರಳವಾದ ತಿನಿಸುಗಳನ್ನು ತೋರಿಸಿದರೆ ಹೆಚ್ಚು ಜನ ನೋಡುತ್ತಾರೆ; ಆಮೇಲೆ ಮಾಡಲು ಪ್ರಯತ್ನಿಸುತ್ತಾರೆ. ಸ್ಕ್ಯಾಂಡಿನೇವಿಯಾ ಹಾಗೂ ಪೋಲೆಂಡ್‌ನವರು ತಾವು ಹೇಳಿಕೊಟ್ಟ ಪಾವ್ ಭಾಜಿ ಮಸಾಲಾ ಮಾಡಿ, ತಿನ್ನುತ್ತಾ ಮುಖ ಅರಳಿಸಿದ ಫೋಟೊ ಹಾಕಿದ್ದನ್ನು ಕಂಡು ವರುಣ್ ದಂಗಾದರಂತೆ.